ಮಳೆ ಬಂದದ್ದು ವಿಪರೀತ ಬಂದುಬಿಟ್ಟಿತು, ಕೋಸ್ಟಲ್ ಬೆಲ್ಟ್‌ನಲ್ಲಿ ಕೇವಲ ಕೆಲವೇ ದಿವಸಗಳಲ್ಲಿ ವಿಪರೀತ ಮಳೆ ಬಂದು ಅದರಲ್ಲಿ ಪ್ರಕೃತಿ ವಿಕೋಪದಿಂದ ತುಂಬಾ ಹಾನಿಯಾಗಿದೆ, ಸುಮಾರು 417 ಮನೆಗಳು ಅಲ್ಲಿ ಬಿದ್ದು ಹೋಗಿದೆ, ನಮ್ಮ ಜಿಲ್ಲಾ ಆಡಳಿತದ ಅಂಕಿಅಂಶದ ಪ್ರಕಾರವೇ 8.27 ಕೋಟಿ ರೂ. ನಷ್ಟವಾಗಿದೆಯೆಂದು ರಾಜ್ಯ ಸರ್ಕಾರಕ್ಕೆ ವರದಿಯನ್ನು ಒಪ್ಪಿಸಿದೆ, ಆದರೆ ನಮ್ಮ ಜಿಲ್ಲೆಗೆ ಪರಿಹಾರ ಎಷ್ಟು ಬಂದಿದೆ? ನನಗೆ ತಿಳಿದ ಮಟ್ಟಿಗೆ ಹಿಂದೆ ಕುಡಿಯುವ ನೀರಿಗೆ ಒದಗಿಸಿದಂಥ 20 ಲಕ್ಷ ರೂ. ಮತ್ತು ಪರಿಹಾರಕ್ಕೆ 20 ಲಕ್ಷ ರೂ. ಒಟ್ಟು 40 ಲಕ್ಷ ರೂ. ಮಾತ್ರ ಬಂದಿದೆ. 8.27 ಕೋಟಿಗೆ ಪ್ರಕೃತಿ ವಿಕೋಪ ಪರಿಹಾರದಲ್ಲಿ ಕೆಲಸ ಮಾಡಲು 40 ಲಕ್ಷ ರೂ. ಮಾತ್ರ ಇದೆ. ಒಂದು ಕಡೆ ನಮಗೆ ಈ ರೀತಿ ಪರಿಹಾರನೂ ಇಲ್ಲ, ಇನ್ನೊಂದು ಕಡೆ ಶಾಶ್ವತವಾಗಿ ನಮ್ಮ ಬೆಳೆಗಳು ಹಾಳಾಗಿರುವ ಹಿನ್ನೆಲೆಯಲ್ಲಿ, ನಮ್ಮ ಜಿಲ್ಲೆಗೆ ಬರ ಬಂದರೆಯೇ ಒಳ್ಳೆಯದಾಗುತ್ತಿತೋ ಎಂದು ನನ್ನ ಮನಸ್ಸಿಗೆ ಅನ್ನಿಸುತ್ತಿದೆ. ಬರ ಬರಬೇಕೆಂದು ನಾನು ಅಪೇಕ್ಷೆ ಪಡುತ್ತಿಲ್ಲ, ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ತಕ್ಷಣ ತೋಟಗಾರಿಕಾ ಮತ್ತು ಕೃಷಿ ಇಲಾಖೆಯವರು ಕಂದಾಯ ಇಲಾಖೆಯವರೊಂದಿಗೆ ಜಂಟಿಯಾಗಿ ಇಡೀ ಜಿಲ್ಲೆಯಲ್ಲಿರುವಂಥ ಪ್ಲಾಂಟೇಷನ್ ಕ್ರಾಪ್‌ನ ಬಗ್ಗೆ ಸಮೀಕ್ಷೆ ನಡೆಸಬೇಕು. ತಕ್ಷಣ ಈ ಪ್ಲಾಂಟೇಷನ್ ಕ್ರಾಪ್‌ನಲ್ಲಿ ರೈತರಿಗೆ ಎಷ್ಟು ತೊಂದರೆಯಾಗಿದೆ ಅದನ್ನು ಬರಿಸಿ ರೀ ಪ್ಲಾಟೇಷನ್‌ಗೆ ಬೇಕಾದಂಥ ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕು, ಪರಿಹಾರಗಳನ್ನೂ ಕೂಡಬೇಕು, ಇದು ಶೀಘ್ರವಾಗಿ ಆಗಬೇಕು, ಏಕೆಂದರೆ, ಈಗ ಮಳೆ ಬಿದ್ದಿದೆ, ಪುನಃ ರೀಪ್ಲಾಂಟ್ ಮಾಡಲು ತುಂಬಾ ದಿನ ತೆಗೆದುಕೊಂಡರೆ ಈ ಕೆಲಸ ಕಾರ್ಯಗಳು ಆಗುತ್ತಿಲ್ಲ, ಇದರ ಬಗ್ಗೆ ಈಗಾಗಲೇ ಮುಖ್ಯಮಂತ್ರಿಯವರಿಗೆ ತೋಟಗಾರಿಕಾ ಸಚಿವರಿಗೆ ಪತ್ರವನ್ನು ಬರೆದಿದ್ದೇನೆ, ತಾವು ಇದನ್ನು ಕನ್‌ಸಿಡರ್ ಮಾಡುತ್ತೀರೆಂದು ತಿಳಿದುಕೊಂಡಿದ್ದೇನೆ, ತಕ್ಷಣ ಇದು ಆಗದಿದ್ದರೆ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆ ಮತ್ತೊಂದು ಬರ ಪೀಡಿತ ಜಿಲ್ಲೆಯಾಗಿ ಮುಂದಿನ ಹಲವಾರು ವರ್ಷಗಳಿಗೆ ಪರಿವರ್ತನೆಯಾಗುವಂಥ ಎಲ್ಲಾ ಲಕ್ಷಣಗಳು ಇರುವಂಥ ಹಿನ್ನೆಲೆಯಲ್ಲಿ ತಕ್ಷಣ ತಾವು ಈ ಕೆಲಸವನ್ನು ಮಾಡಿ ರೈತರ ಸಹಾಯಕ್ಕೆ ತಾವು ಬರಬೇಕು, ನಮ್ಮ ಅಡಿಕೆ ಬೆಳೆಗಾರರಿಗೆ ಹಿಂದೆ ತೊಂದರೆಯಾದಾಗ ತಾವು ಸಹಾಯಕ್ಕೆ ಬಂದಿದ್ದೀರಿ. ಈಗಲೂ ಕೂಡ ಸಹಾಯಕ್ಕೆ ಬರಬೇಕು ಎಂಬ ವಿನಂತಿಯನ್ನು ಆ ಎರಡೂ ಜಿಲ್ಲೆಯ ಎಲ್ಲಾ ರೈತಾಪಿ ಜನರ ಪರವಾಗಿ ತಮಗೆ ಮಾಡಿಕೊಳ್ಳಲು ಇಷ್ಟಪಡುತ್ತೇನೆ.

(ii) ವಿಷಯ: ಚಲನಚಿತ್ರ ಮಂದಿರಗಳಲ್ಲಿ ವಸೂಲು ಮಾಡಲಾಗುತ್ತಿರುವ ಸೇವಾ ಶುಲ್ಕದ ಬಗ್ಗೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ):– ಸನ್ಮಾನ್ಯ ಅಧ್ಯಕ್ಷರೇ, ಮೊದಲನೆಯದಾಗಿ, ಇದೊಂದು ಬಹಳ ಮಹತ್ವದ ವಿಚಾರ ಮತ್ತು ನಾಳೆಯ ದಿನ ಕರ್ನಾಟಕದ ರಾಜಧಾನಿಯಲ್ಲಿ ಏನು ಆಗುತ್ತದೋ ಎನ್ನುವಂತಹ ಭಯ ಇರುವುದರಿಂದಾಗಿ, ಸರ್ಕಾರ ಅಸ್ತಿತ್ವದಲ್ಲಿ ಇದೆಯೇ? ಸರ್ಕಾರ ಅಸ್ತಿತ್ವದಲ್ಲಿ ಇದ್ದರೆ, ಏನು ಕ್ರಮ ತೆಗೆದುಕೊಂಡಿದೆ? ಸರ್ಕಾರದ ಅಸ್ತಿತ್ವವನ್ನು ಇವರೆಲ್ಲಾ ಗಮನಕ್ಕೆ ತೆಗೆದುಕೊಂಡಿದ್ದಾರೋ? ಎನ್ನುವಂತಹ ವಿಚಾರವನ್ನು ಕೇಳಲಿಕ್ಕಾಗಿ ನಾನು ಈ ವಿಚಾರವನ್ನು ತಮ್ಮ ಅನುಮತಿ ಕೋರಿ ಪ್ರಸ್ತಾಪ ಮಾಡುತ್ತಿದ್ದೇನೆ. ಮಾನ್ಯ ಅಲ್ಲಂ ವೀರಭದ್ರಪ್ಪನವರಿಗೆ ನಾನು ಈ ಮಆತನ್ನು ಹೇಳುತ್ತಿದ್ದೇನೆ. ಈ ಬಗ್ಗೆ ನಾನು ಈಗಾಗಲೇ ಅವರ ಜಒತೆಗೆ ಮಾತನಾಡಿದ್ದೇನೆ. ಚಿತ್ರಮಂದಿರದ ಮಾಲೀಕರು ಮತ್ತು ನಿರ್ಮಾಪಕರ ಮಧ್ಯೆ ನಡೆಯುತ್ತಿರತಕ್ಕಂಥ ತಕರಾರು ಏನಿದೆ,

ಮತ್ತು ಈ ರಾಜ್ಯದ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷರು ಏನಿದ್ದಾರೆ, ಇವರು ಸರ್ಕಾರದ ಅಸ್ತಿತ್ವವನ್ನೇ ಮರೆತು ಬಿಟ್ಟಿದ್ದಾರೆ ಏನೋ ಎಂದು ನನಗಾದರೂ ಅನ್ನಿಸುತ್ತಿದೆ.

ಶ್ರೀ ಡಿ.ಬಿ. ಚಂದ್ರೇಗೌಡ:– ಮಾನ್ಯ ಸಿಂಧ್ಯಾರವರೇ, ಸರ್ಕಾರ ಮತ್ತು ಚಲನಚಿತ್ರದವರು ಅಕ್ಕ ಪಕ್ಕದಲ್ಲಿ ಕುಳಿತ್ತಿದ್ದಾರೆ. ಇದಕ್ಕಿಂತ ಇನ್ನೇನು ನಿಮಗೆ facilitate ಮಾಡಬೇಕು?

ಅಧ್ಯಕ್ಷರು:– ಅಸ್ತಿತ್ವದಲ್ಲೇ ಇಲ್ಲ ಎನ್ನುವುದಾದರೆ, ಅವರುಗಳು ಇಲ್ಲಿ ಏಕೆ ಬಂದು ಕುಳಿತುಕೊಳ್ಳುತ್ತಿದ್ದರು?

ಶ್ರೀ ಪಿ.ಜಿ.ಆರ್. ಸಿಂಧ್ಯಾ:– ನನ್ನ ದೃಷ್ಟಿಯಿಂದ ಅಸ್ತಿತ್ವದಲ್ಲಿ ಇದೆ ಸ್ವಾಮಿ. ಕೆಲವರ ದೃಷ್ಟಿಯಿಂದಾಗಿ ಅಸ್ತಿತ್ವದಲ್ಲಿ ಇಲ್ಲ. ಅವರು ಸರ್ಕಾರದ ಮೇಲಿರತಕ್ಕಂಥ ಜನ ಎನ್ನುವ ರೀತಿಯಲ್ಲಿ ವರ್ತನೆ ಮಾಡುತ್ತಿದ್ದಾರೆ. ನೀವು ಇತ್ತೀಚೆಗೆ ಮನೆಯಿಂದ ಹೊರಗಡೆ ಸಿನಿಮಾ ನೋಡಿಲ್ಲವೆಂದು ಕಾಣುತ್ತದೆ. ಸಿನಿಮಾ ಥಿಯೇಟರಿಗಳಿಗೆ ಹೋಗಿ ನೋಡಿದರೆ, ಅಲ್ಲಿರತಕ್ಕಂಥ ವಾಸನೆ, ಅಲ್ಲಿರತಕ್ಕಂಥ ಶೌಚಾಲಯಗಳ ಪರಿಸ್ಥಿತಿ, ಏರ್ ಕಂಡೀಷನ್ ಎಂದು ಬೋರ್ಡ್ ಹಾಕಿದ್ದರೂ ಅಲ್ಲಿ ಒಳಗಡೆ ಕೇಳಿ ಬರುವಂತಹ ಶಬ್ದಗಳು, ಅದೊಂದು ಭಯಂಕರವಾಗಿರತಕ್ಕಂಥ ನರಕ ಯಾತನೆ. Entertainment Tax ಎಂಬುದನ್ನು ಸರ್ಕಾರ ವಸೂಲು ಮಾಡುತ್ತಿದೆ. ಚಲನಚಿತ್ರ ಮಂದಿರಗಳನ್ನು ಕೇಳುವವರೇ ಇಲ್ಲ ಎನ್ನುವಂತಹ ಸ್ಥಿತಿ ಈಗ ಬಂದೊದಗಿದೆ. ಕನ್ನಡ ಚಲನಚಿತ್ರಗಳನ್ನು ಪ್ರದರ್ಶಿಸತಕ್ಕಂಥ ಮಂದಿರಗಳಲ್ಲಂತೂ ಬಹಳ ದುಸ್ಥಿತಿ ಇದೆ. ಮಾನ್ಯ ಅಧ್ಯಕ್ಷರೇ, ಇದು ನನಗೆ, as far as I am concerned, ನಿಮಗೇನು ಸಂಬಂಧ ಇದು? ನಾನು ಒಬ್ಬ ವೀಕ್ಷಕನಾಗಿ ಹಾಗೂ ರಾಜ್ಯದ ಬೊಕ್ಕಸದ ದೃಷ್ಟಿಯಿಂದಾಗಿ ನಾನು ಗಮನ ಇಟ್ಟಿರತಕ್ಕವನು. ಕಳೆದ 3–4 ದಿನಗಳಿಂದ ಪ್ರದರ್ಶನಗಳು ನಡೆಯುತ್ತಿಲ್ಲ. ಮಾನ್ಯ ಅಲ್ಲಂರವರು ವಾರ್ತಾ ಮಂತ್ರಿಗಳಾಗಿ ಮಧ್ಯಸ್ಥಿಕೆ ವಹಿಸುತ್ತಿದ್ದಾರೆಂದು ನಾನು ಕೇಳಲ್ಪಟ್ಟಿದ್ದೇನೆ ಹಾಗೂ ಪತ್ರಿಕೆಗಳಿಂದ ತಿಳಿದುಕೊಂಡಿದ್ದೇನೆ. ನಾಳೆಯ ದಿವಸ ನಮ್ಮ ರಾಜ್ಯದ ಹೆಮ್ಮೆಯ ಪುತ್ರ ಡಾ: ರಾಜ್‌ಕುಮಾರ್‌ರವರ ನೇತೃತ್ವದಲ್ಲಿ ಈ ನಿರ್ಮಾಪಕರೆಲ್ಲಾ ಮೆಜೆಸ್ಟಿಕ್‌ನಲ್ಲಿ ಧರಣಿ ಮಾಡುತ್ತಿದ್ದಾರೆಂದು ನಾನು ಕೇಳಿದ್ದೇನೆ. ಅದರ ಪರಿಣಾಮವೇನು? ನಾಳೆ ಇಡೀ ಬೆಂಗಳೂರು ನಗರದಲ್ಲಿ ಒಂದು ರೀತಿ tension ಇರುತ್ತದೆ ಎನ್ನುವುದನ್ನು ತಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಏನಾದರೂ ಒಂದು ಸಣ್ಣ ಘಟನೆಯಾದರೆ, ಅದು ವಿಕೋಪಕ್ಕೆ ಹೋಗತಕ್ಕಂಥ ಸಂಭವಗಳಿವೆ ಎನ್ನುವುದನ್ನು ಸರ್ಕಾರ ಗಮನಿಸಬೇಕಾಗುತ್ತದೆ. ಈಗಾಗಲೇ ಸಾವಿರಾರು ಜನ ಪೊಲೀಸರನ್ನು ಅಲ್ಲಿಗೆ ಕಳುಹಿಸತಕ್ಕಂಥ ವ್ಯವಸ್ಥೆಯಾಗುತ್ತಿದೆ. ಈಗ ನಿರ್ಮಾಪಕರುಗಳು ಏನು ಹೇಳಿದ್ದಾರೆ? ಇದು ಕನ್ನಡದ ಭಾಷೆ, ಕನ್ನಡದ ಸಂಸ್ಕೃತಿಗೆ ಆಗುತ್ತಿರತಕ್ಕಂಥ ಒಂದು ಆಘಾತ, ಸಂಸ್ಕೃತಿ ಮತ್ತು ಭಾಷೆಯನ್ನು ಉಳಿಸಿಕೊಳ್ಳಲಿಕ್ಕೆ ಅದರ ಪರವಾಗಿ ನಾವು ಹೋರಾಟ ಮಾಡುತ್ತಿದ್ದೇವೆ ಅನ್ನತಕ್ಕಂಥ ಮಾತನ್ನೂ ಸಹಿತ ಅವರು ಹೇಳಿದ್ದಾರೆ. ಇದರಲ್ಲಿ ಬಹಳ ಪ್ರಮುಖವಾಗಿರತಕ್ಕಂಥದ್ದು ಏನೆಂದರೆ, ಈ ಒಂದು ಪ್ರದರ್ಶನಗಳನ್ನು ನಿಲ್ಲಿಸಿರುವುದರಿಂದಾಗಿ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗುವುದಿಲ್ಲವೇನು? ನಷ್ಟ ಆಗಿಯೇ ಆಗುತ್ತದೆ. ಇಂತಹ ಒಂದು ದುಷ್ಕಾಲದ ಸ್ಥಿತಿಯಲ್ಲಿ, ಸರ್ಕಾರಕ್ಕೆ ಹಣ ಬರದೇ ಇರತಕ್ಕಂಥ ಸ್ಥಿತಿಯಲ್ಲಿ ಈ ರೀತಿಯ ವಿಚಾರಗಳಿಗೆ, ನೀವು ಈಗಾಗಲೇ ಇದರ ಮಧ್ಯಸ್ಥಿಕೆ ವಹಿಸಿರತಕ್ಕಂಥದ್ದು ಸರಿಯಾದರೂ ಸಹಿತ, ಇದುವರೆಗೂ ಯಾವುದೇ ಪರಿಣಾಮಕಾರಿಯಾದಂತಹ ತೀರ್ಮ ಹೊರಗಡೆ ಬಂದಿಲ್ಲ. ಅವರು ಬೀದಿಗಿಳಿದು ಹೋರಾಟ ಮಾಡತಕ್ಕಂಥ ಪರಿಸ್ಥಿತಿ ಇದೆ. ಈಗಾಗಲೇ ನಾವು ಕನ್ನಡ ಚಲನಚಿತ್ರಗಳಿಗೆ ನೂರಕ್ಕೆ ನೂರರಷ್ಟು ತೆರಿಗೆ ವಿನಾಯಿತಿಯನ್ನು ನಮ್ಮ ಕಾಲದಲ್ಲಿ ಕೊಟ್ಟಿದ್ದೇವೆ.

ಮಾನ್ಯ ಜೆ.ಹೆಚ್. ಪಟೇಲ್‌ರವರು ಬದುಕಿದ್ದಾಗಲೇ, ಅವರೆಲ್ಲಾ ಬಂದು ಸರ್ಕಾರಕ್ಕೆ ಮನವಿ ಮಾಡಿಕೊಂಡಾಗ, ಕನ್ನಡ ಚಲನಚಿತ್ರ ರಂಗಕ್ಕೆ ಪ್ರೋತ್ಸಾಹ ಕೊಡಬೇಕೆಂದು ನೂರಕ್ಕೆ ನೂರರಷ್ಟು ತೆರಿಗೆ ವಿನಾಯಿತಿಯನ್ನು ನಾವು ನೀಡಿದೆವು. ಆದರೆ ಚಲನಚಿತ್ರ ಮಂದಿರಗಳಲ್ಲಿ ವಸೂಲು ಮಾಡಲಾಗುತ್ತಿರುವ ಸೇವಾ ಶುಲ್ಕವನ್ನು ರದ್ದು ಮಾಡಬೇಕೆಂಬುದು ನನ್ನ ಅಭಿಪ್ರಾಯವಾಗಿದೆ. ಅದರಲ್ಲಿ ನಮಗೂ ಪಾಲು ಬೇಕು ಎಂದು ಇವತ್ತು ವಾದ ವಿವಾದಗಳಾಗುತ್ತಿದೆ. ಇದರ ಜೊತೆಗೆ ಈ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷರು ಸರ್ಕಾರದ ಹತ್ತಿರ ಬಂದಿದ್ದಾರೆಯೇ? ನಿಮಗೇನಾದರೂ ಬೇಡಿಕೆಗಳನ್ನು ಸಲ್ಲಿಸಿದ್ದಾರೆಯೇ? ಏಕೆ ಈ ಸ್ಥಿತಿ ಬಂದಿತು ಎನ್ನುವುದನ್ನು ಇವತ್ತು ಸರ್ಕಾರ ತಿಳಿಸಬೇಕಾಗುತ್ತದೆ. ಆದಷ್ಟು ಬೇಕ ಸರ್ಕಾರ ಇದನ್ನು ಬಗೆಹರಿಸಬೇಕು. ಡಾ: ರಾಜ್ ಕುಮಾರ್‌ರವರು ಬೀದಿಗಿಳಿದು ಹೋರಾಟಕ್ಕೆ ಹೋಗತಕ್ಕಂಥ ಸ್ಥಿತಿಗೆ ಸರ್ಕಾರ ತರಬಾರದು. ಇದೊಂದು ಭಾಗವಾದರೆ, ಇನ್ನೊಂದು ಭಾಗ ಬಹಳ ಪ್ರಮುಖವಾಗಿ ರಾಜ್ಯದ ಬೊಕ್ಕಸಕ್ಕೆ ಇದರಿಂದ ತೊಂದರೆಯಾಗುತ್ತದೆ. ಈ ಸಂದರ್ಭದಲ್ಲಿ ನಾನು ನಿಮಗೆ ವಿಶೇಷವಾಗಿ ಒತ್ತಾಯಿಸುವುದೇನೆಂದರೆ, ಚಲನಚಿತ್ರ ಮಂದಿರಗಳೇನಿವೆ, ಅವುಗಳ ದುಸ್ಥಿತಿ ಏನಿದೆ, ಅದನ್ನು ಸ್ವಲ್ಪ ಸರಿ ಮಾಡುವುದಕ್ಕೆ ವಿಶೇಷವಾಗಿ ಬೆಂಗಳೂರಿನಲ್ಲಿ ತಾವು ಕ್ರಮ ತೆಗೆದುಕೊಳ್ಳಬೇಕು. ಮಾನ್ಯ ವಾರ್ತಾ ಮಂತ್ರಿಗಳು ಇದಕ್ಕೆ ಉತ್ತರ ಕೊಡುತ್ತಾರೆಂದು ನಾನು ನಿರೀಕ್ಷೆ ಮಾಡುತ್ತೇನೆ.

ಶ್ರೀ ಡಿ.ಆರ್. ಪಾಟೀಲ್:– ಮಾನ್ಯ ಅಧ್ಯಕ್ಷರೇ, 1993 ರಿಂದ ಸೇವಾ ಶುಲ್ಕ ಜಾರಿಯಲ್ಲಿದೆ. ಆಗ ಮಾನ್ಯ ಬಂಗಾರಪ್ಪನವರ ಸರ್ಕಾರ ಇತ್ತು, ನಂತರ ನಿಮ್ಮ ಸರ್ಕಾರ ಬಂತು, ಈಗ ನಮ್ಮ ಸರ್ಕಾರ ಬಂತು ಈಗಾಗಲೇ ಮೂರು ವರ್ಷ ಕಳೆಯಿತು. ಈಗ ಈ ಸೇವಾ ಶುಲ್ಕವನ್ನು ತೆಗೆಯಬೇಕೆಂಬ ಬೇಡಿಕೆ ಏಕೆ ಬಂದಿದೆಯೋ ಎಂಬುದು ನನಗೆ ಗೊತ್ತಾಗುತ್ತಿಲ್ಲ. ಅದಕ್ಕೇನಾದರೂ ಒಂದು ಕಾರಣ ಇರಬೇಕಲ್ಲವೇ? ಕಳೆದ ಹತ್ತು ವರ್ಷಗಳಿಂದ ಇದ್ದುದ್ದನ್ನು ಈಗ ತೆಗೆಯಬೇಕೆಂದರೆ, ಅದಕ್ಕೇನಾದರೂ ಬಲವಾದ ಕಾರಣ ಇರಬೇಕಲ್ಲವೇ? ಅದೇನು ಕಾರಣ ಎನ್ನುವುದನ್ನು ಮಾನ್ಯ ಮಂತ್ರಿಗಳು ದಯವಿಟ್ಟು ಈ ಸದನಕ್ಕೆ ತಿಳಿಸಬೇಕು.

ಅಧ್ಯಕ್ಷರು:– ಶೂನ್ಯ ವೇಳೆಯಲ್ಲಿ ಸಾಮಾನ್ಯವಾಗಿ ಯಾರು ಪ್ರಸ್ತಾಪ ಮಾಡುತ್ತಾರೋ ಅವರು ಮಾತ್ರ ಮಾತನಾಡಬೇಕು. ಏನೋ as a special case ನಿಮಗೆ ನಾನು ಸ್ವಲ್ಪ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದೆ. ಮತ್ತೆ ಯಾರೂ ಇದರ ಬಗ್ಗೆ ಮಾತನಾಡುವುದು ಬೇಡ. ಈಗ ಮಾನ್ಯ ಸಚಿವರು ಇದರ ಬಗ್ಗೆ ಉತ್ತರ ಕೊಡುತ್ತಾರೆ.

+ಶ್ರೀ ಅಲ್ಲಂ ವೀರಭದ್ರಪ್ಪ (ವಾರ್ತಾ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):– ಮಾನ್ಯ ಅಧ್ಯಕ್ಷರೇ, ಮಾನ್ಯ ಶಾಸಕರು ಹೇಳಿದಂತಹ ವಿಷಯಗಳೆಲ್ಲಾ ಸತ್ಯವಾಗಿವೆ. ಇವತ್ತು ಚಲನಚಿತ್ರ ಮಂದಿರಗಳು ಬೆಂಗಳೂರಿನಲ್ಲಿ ಬಂದ್ ಆಗಿವೆ, ರಾಜ್ಯಾದ್ಯಂತ ಬಂದ್ ಆಗಿಲ್ಲ, ಕೆಲವೊಂದು ಸೆಂಟರ್ಸ್‌ನಲ್ಲಿ ನಡೆಯುತ್ತಿವೆ, ಒಟ್ಟಾರೆಯಾಗಿ ಇದರಿಂದಾಗಿ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗಿದೆ. ತಮಗೆಲ್ಲಾ ತಿಳಿದಂತೆ ನಾನು 11ನೇ ತಾರೀಖು ಪತ್ರಿಕೆ ಮೂಲಕ ನಿರ್ಮಾಪಕರು ನಾವು ರೀಲುಗಳನ್ನು ಕೊಡುವುದಿಲ್ಲ, ನಾವು ಪ್ರದರ್ಶನಗಳನ್ನು ಬಂದ್ ಮಾಡಿ ಎಂದು ಹೇಳಿದ್ದಾರೆ, ಸಿನಿಮಾ ಥಿಯೇಟರುಗಳ ಮಾಲೀಕರು ನಮ್ಮ ಮಾತುಗಳನ್ನು ಕೇಳುವುದಿಲ್ಲ, ಅದಕ್ಕೆ ನಾವೊಂದು ನಿರ್ಧಾರಕ್ಕೆ ಬಂದಿದ್ದೇವೆ ಎಂದು ಅವರು ಒಂದು uniiateral decision ಅನ್ನು ತೆಗೆದುಕೊಂಡು ಬಿಟ್ಟರು. ಅದು ನನಗೆ ಪತ್ರಿಕೆಗಳ ಮೂಲಕ ತಿಳಿದು ಬಂದಿತು. ನನ್ನ ಹತ್ತಿರ Producers ಬರಲಿಲ್ಲ, Cinema Theatres ನವರು ಸಹ ಬರಲಿಲ್ಲ, Exhibitors ಬರಲಿಲ್ಲ, ಚಿತ್ರೋದ್ಯಮದ ಯಾರೂ

(+ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಕೂಡ ನನ್ನನ್ನು ಬೇಟಿ ಮಾಡಲಿಲ್ಲ. ಅವರೇ unilateral decision ತೆಗೆದುಕೊಂಡರು. ಇದನ್ನೆಲ್ಲಾ ಗಮನಿಸಿ ಸರ್ಕಾರ ಸುಮ್ಮನೆ ಕುಳಿತುಕೊಳ್ಳಲು ಸಾಧ್ಯವಾಗಲಿಲ್ಲ. ಅವತ್ತೇ ನಾನು Film distributors, Exhibitors and Cinema Theatre ಮಾಲೀಕರುಗಳನ್ನು ಕರೆಸಿದೆ. 10.30 ಗಂಟೆಗೆ ನಿರ್ದೇಶಕರು ಬಂದರು. ತಮ್ಮ ಸಮಸ್ಯೆಗಳನ್ನು ನನ್ನ ಬಳಿ ಹೇಳಿಕೊಂಡರು. ಸಾಯಂಕಾಲ ನಿರ್ಮಾಪಕರುಗಳು ಕೂಡ ಬಂದರು. ನಿರ್ಮಾಪಕರ ಸಂಘದ ಅಧ್ಯಕ್ಷರಾದ ಬಸಂತ್‌ಕುಮಾರ್ ಪಾಟೀಲ್‌ರವರು ಮತ್ತು ನಮ್ಮ ಹಿರಿಯರಾದಂತಹ ಶ್ರೀಮತಿ ಪಾರ್ವತಮ್ಮನವರು ಮತ್ತು ರಾಘವೇಂದ್ರರವರು, ಇವರೆಲ್ಲರೂ ಕೂಡ ಅಂದು ಬಂದಿದ್ದರು. ಅವರೂ ಸಹ ತಮ್ಮ ಸಮಸ್ಯೆಗಳನ್ನು ನನ್ನ ಬಳಿ ಹೇಳಿಕೊಂಡರು. ಅವತ್ತು ಶುಕ್ರವಾರವಾಗಿತ್ತು. ನಾನು ಅವರಿಗೆ, ನನಗೆ ಶನಿವಾರ ಮತ್ತು ಭಾನುವಾರಗಳಂದು ಪ್ರೋಗ್ರಾಮ್‌ಗಳಿರುತ್ತವೆ, ನಾನು ಆದಷ್ಟು ಮಟ್ಟಿಗೆ ಸೋಮವಾರದಂದು ಮತ್ತೊಂದು ಮೀಟಿಂಗ್ ಮಾಡುತ್ತೇನೆ ಎಂದು ಹೇಳಿದೆ. ಅಷ್ಟರೊಳಗೆ ಏನಾಗಿತ್ತು ಎಂದರೆ, ನಿನ್ನೆ ಅಂದರೆ 15ನೇ ತಾರೀಖು ರಾಜ್ಯದ ಥಿಯೇಟರುಗಳ ಓನರ್ಸ್ ಮೀಟಿಂಗ್ ಅನ್ನು ಹುಬ್ಬಳ್ಳಿಯಲ್ಲಿ ಇಟ್ಟುಕೊಂಡಿದ್ದರು. ಅಲ್ಲಿಂದ ನನಗೆ ಒಂದು ಟೆಲಿಗ್ರಾಮ್ ಬಂದಿತ್ತು. ನಾವು ಮೀಟಿಂಗ್ ಮಾಡುತ್ತಿರುವ ಕಾಲಕ್ಕೆ ನೀವು ನಮ್ಮನ್ನು ಅಲ್ಲಿಗೆ ಕರೆಸಿಕೊಂಡು ಇದರ ಬಗ್ಗೆ ನಿಮ್ಮ ಡಿಸಿಷನ್ ಏನು ಎಂಬುದನ್ನು ಹೇಳಿ ಎಂದರೆ ನಾವು ಹೇಳುವುದಕ್ಕಾಗುವುದಿಲ್ಲ, ನಾವು ಸ್ಟೇಪ್ ಲೆವೆಲ್ ಮೀಟಿಂಗ್ ಆದ ಮೇಲೆ ಬರುತ್ತೇವೆ, ಆ ಮೀಟಿಂಗ್‌ನಲ್ಲಿ ನಾವು ಏನೊಂದು ಡಿಸಿಷನ್ ಅನ್ನು ತೆಗೆದುಕೊಳ್ಳುತ್ತೇವೋ ಅದನ್ನು ನಾವು ತಮಗೆ ಹೇಳುತ್ತೇವೆ ಎಂದಾಗ, ನಾನು ಸೋಮವಾರದ ಮೀಟಿಂಗ್ ಅನ್ನು postpone ಮಾಡಿದೆ. ಆ ಮೀಟಿಂಗ್ ಅನ್ನು postpone ಮಾಡಲಾಗಿದ್ದು ಆ ಮೀಟಿಂಗ್ ಅನ್ನು ಇವತ್ತು ಕರೆದಿದ್ದೇನೆ ಎಂದು ನಿನ್ನೆ ಅಂದರೆ ಮಂಗಳವಾರವೇ ನಾನು ಎಲ್ಲಾ ಪತ್ರಿಕೆಗಳಿಗೂ ಕೂಡ ಪ್ರಕಟಣೆ ಕೊಟ್ಟಿದ್ದೇನೆ ಹಾಗೂ ಸಂಬಂಧಪಟ್ಟವರೆಲ್ಲರಿಗೆ ಫೋನ್ ಮೂಲಕವೂ ಕೂಡ ತಿಳಿಸಿದ್ದೇನೆ. ಇವತ್ತು ಸಾಯಂಕಾಲ 4.30 ಗಂಟೆಯವರೆಗೆ ನಾನು wait ಮಾಡುತ್ತಿದ್ದೇನೆ. ಈ ವಿಚಾರ ನಿನ್ನೆ ಮೇಲ್ಮನೆಯಲ್ಲೂ ಕೂಡ ಪ್ರಸ್ತಾಪವಾಯಿತು. ಅಲ್ಲಿ ಯಾವ ಸದಸ್ಯರುಗಳು ಕಾಳಜಿ ವಹಿಸಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದರೋ, ಅವರಿಗೂ ಸಹ ಇಂದಿನ ಸಾಯಂಕಾಲದ ಸಭೆಗೆ ಬರುವಂತೆ ತಿಳಿಸಿದ್ದೇನೆ. ತಾವೂ ಕೂಡ ಆ ಸಭೆಗೆ ಬನ್ನಿ. ಇಂದು 4.30 ಗಂಟೆಗೆ ನಡೆಯುವ ಸಭೆಗೆ ಎಲ್ಲರನ್ನೂ ನಾನು ಕರೆದಿದ್ದೇನೆ. ಅವರುಗಳು ಬರುತ್ತಾರೋ ಇಲ್ಲವೋ ಎಂದುಕೊಂಡು ನಾನು ಸಂಬಂಧಪಟ್ಟರೆಲ್ಲರಿಗೂ ಕೂಡ ಫೋನ್ ಮಾಡಿಸಿ ಸಹ ತಿಳಿಸಿದ್ದೇನೆ. ಈ ಹಂತದಲ್ಲಿ ಏನನ್ನೂ ನಾನು ಹೇಳಲಿಕ್ಕೆ ಇಚ್ಚೆ ಪಡುವುದಿಲ್ಲ. ಅವರುಗಳು ಇಬ್ಬರೂ ಬಂದು ಸರ್ಕಾರದ ಹತ್ತಿರ ಡಿಸ್ಕಸ್ ಮಾಡಿದರೆ ಏನಾದರೊಂದು ನಿರ್ಣಯವನ್ನು ಕೈಗೊಳ್ಳಲಿಕ್ಕೆ ಸಾಧ್ಯವಾಗುತ್ತದೆ. ಥಿಯೇಟರುಗಳ ಬಗ್ಗೆ ಹೇಳುವುದಾದರೆ, ಅದರ ಬಗ್ಗೆ ಎರಡನೇ ಚಿಂತನೆ ಇಲ್ಲ. There is no second opinion about this. ಥಿಯೇಟರ್‌ಗಳಲ್ಲಿ ಚೆನ್ನಾಗಿ ಮೆಂಟೇನ್ ಮಾಡಲೆಂದು, ಒಳ್ಳೆಯ hygienic, ಒಳ್ಳೆಯ Chairಗಳು, ಒಳ್ಳೆಯ Sound system ಕೊಡಬೇಕೆಂದು ನಾವು ಈ ಹಣವನ್ನು ಅವರಿಗೆ ಕೊಟ್ಟಿದ್ದೇವೆ. ಕೆಲವು ಭಾಗಗಳಲ್ಲಿ ಥಿಯೇಟರುಗಳ Modernisation ಮಾಡಿದ್ದಾರೆ, ಮತ್ತೆ ಕೆಲವು ಭಾಗಗಳಲ್ಲಿ ಅದು ಆಗಿಲ್ಲ. ಅದಕ್ಕಿಂತ ಹೆಚ್ಚಾಗಿ ನಾವು hygienic point ನಿಂದ ಕ್ಲೀನಾಗಿ ಲ್ಯಾವೆಟ್ರೀಸ್ ಇಡಬೇಕೆಂದು ನಾವು ಥಿಯೇಟರ್‌ಗಳಿಗೆ ಹೇಳುತ್ತೇವೆ. ಕನಿಷ್ಟ ತಿಂಗಳಿಗೊಂದು

ಸಾರಿಯಾದರೂ ಥಿಯೇಟರ್‌ಗಳ inspection ಮಾಡಿ ಸರ್ಕಾರಕ್ಕೆ report ಕೊಡಬೇಕೆಂದು ನಾನು ಡಿ.ಸಿ. ಗಳಿಗೆ ಇವತ್ತೇ ಆದೇಶ ನೀಡುತ್ತೇನೆ. ನನ್ನ ಗಮನಕ್ಕೆ ತಂದಂತಹ ಸಮಸ್ಯೆಗಳನ್ನು ನಿವಾರಿಸಲು ನಾನು ಚಿಂತನೆ ಮಾಡುತ್ತೇನೆ. ಇದಕ್ಕಿಂತ ಹೆಚ್ಚಿನ ಉತ್ತರವನ್ನು ನಾನು ಈಗ ಕೊಡುವುದಕ್ಕಾಗುವುದಿಲ್ಲ. ಇವತ್ತು 4.30 ಗಂಟೆಗೆ ಮೀಟಿಂಗ್ ಕರೆದಿದ್ದೇನೆ. ಆ ಮೀಟಿಂಗ್ ಆದ ಮೇಲೆ ಆ ಬಗ್ಗೆ ಹೆಚ್ಚಿನ ವಿವರಗಳನ್ನು ಕೊಡುತ್ತೇನೆ. ಆ ಸಭೆಗೆ ಎಲ್ಲರೂ ಬಂದು ಭಾಗವಹಿಸಿದರೆ ನಮ್ಮ ಸರ್ಕಾರಕ್ಕೆ ಡಿಸ್ಕಷನ್‌ನಲ್ಲಿ ಅನುಕೂಲವಾಗುತ್ತದೆ, ಆದ್ದರಿಂದ ಸದರಿ ಸಭೆಯಲ್ಲಿ ಭಾಗವಹಿಸಬೇಕೆಂದು ನಾನು ಎಲ್ಲರನ್ನೂ ಕೋರುತ್ತೇನೆ. ನಾವು ಇದುವರೆಗೂ ಯಾವ ತರಹದ ಡಿಸಿಷನ್ ಅನ್ನೂ ಸಹ ಈ ದಿಸೆಯಲ್ಲಿ ತೆಗೆದುಕೊಂಡಿಲ್ಲ. We have kept our mind open. ಸಭೆಯಲ್ಲಿ ಏನು ತೀರ್ಮಾನವಾಗುತ್ತದೋ ಎಂದು ನೋಡೋಣ. ಒಟ್ಟಾರೆಯಾಗಿ ಈ ಉದ್ಯಮ ಸಂಕಷ್ಟಕ್ಕೆ ಸಿಲುಕಬಾರದು. ಇವತ್ತು ಸಾವಿರಾರು ಕಾರ್ಮಿಕರು ಈ ಉದ್ಯಮದಲ್ಲಿ ಇದ್ದಾರೆ. Indirect ಆಗಿ ಲಕ್ಷಾಂತರ ಜನ ಸಿನಿಮಾ Producers, Directors, Cameramen, Technicians ಎಲ್ಲಾ ಇದ್ದಾರೆ. ಅವರಿಗೆಲ್ಲಾ ಈಗ ನಷ್ಟವಾಗಿದೆ. ಆ ಚಿಂತನೆಯಿಂದ ನಾನು ಇವತ್ತು ಈ ಮೀಟಿಂಗ್ ಅನ್ನು ಕರೆದಿದ್ದೇನೆ. ಮಾನ್ಯ ಸದಸ್ಯರು ಪ್ರಸ್ತಾಪಿಸಿದ ವಿಷಯ ಸರ್ಕಾರದ ಗಮನಕ್ಕೆ ಬಂದಿದೆ. 4.30 ಗಂಟೆಯ ಮೀಟಿಂಗ್ ಆದ ನಂತರ, ಅದರ ಫಲಶ್ರುತಿಯನ್ನು ನಾನು ಸದನಕ್ಕೆ ತಿಳಿಸುತ್ತೇನೆ.

1.00 ಪಿ.ಎಂ.

(iii) ವಿಷಯ:– ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅತಿ ವೃಷ್ಟಿಯಿಂದ ಹಾನಿಯಾದವರ ಕುಟುಂಬಗಳಿಗೆ ಪರಿಹಾರ ಒದಗಿಸುವ ಬಗ್ಗೆ:–

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು):– ಸನ್ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಆ್ಯವರೇಜ್ 25 ರಿಂದ 30 ಮಿಲಿ ಮೀಟರ್ ಮಳೆ ಪ್ರತಿ ದಿವಸ ಬರುತ್ತದೆ. ಆದರೆ 21 ಮತ್ತು 22ನೇ ಜೂನ್ 196 ಮಿಲಿ ಮೀಟರ್, ಮತ್ತು 22ನೇ ತಾರೀಖು 301 ಮಿಲಿ ಮೀಟರ್ ಮಳೆ ಬಂದಿದೆ. ಈ ತರಹ ಧಾರಾಕಾರವಾಗಿ ಬಂದಿರುವ ಮಳೆ ಅತಿವೃಷ್ಟಿಯಿಂದ ಏಳು ಜನ ಸತ್ತು ಹೋಗಿದ್ದಾರೆ. ಈ ಅವಘಡದಲ್ಲಿ ಮನೆ ಕುಸಿತ, ಕಟ್ಟಡ ಕುಸಿತ ಮತ್ತು ಬೇರೆ ಬೇರೆ ಕಾರಣಗಳಿಂದ ಏಳು ಜನ ಅಸುನೀಗಿದ್ದಾರೆ. ಅವರ ಕುಟುಂಬಕ್ಕೆ ಪರಿಹಾರ ಕೊಡಬೇಕಾಗಿದೆ. ಹಾನಿಯಾದ ವಾಸದ ಮನೆಗಳು 417, ಹಾನಿಯಾದ ರಸ್ತೆಗಳು 127 ಗಾಯಗೊಂಡವರು ಆರು ಜನ, ಹಾನಿಯಾದ ಕಟ್ಟಡಗಳು 25, ಕೃಷಿ ಹಾನಿ 212.25 ಹೆಕ್ಟೇರುಗಳಷ್ಟು. ಮಂಗಳೂರು ಮಹಾನಗರ ಪಾಲಿಕೆಗೆ ಆದ ನಷ್ಟ 1.36 ಲಕ್ಷ ರೂಪಾಯಿ. ಇಡೀ ದಕ್ಷಿಣ ಕನ್ನಡದಲ್ಲಿ ಆಗಿರುವಂತಹ ನಷ್ಟ ಎಂಟು ಕೋಟಿ 27.43 ಲಕ್ಷ ಸಾವಿರ ರೂಪಾಯಿಗಳು ಇಷ್ಟು ಭೀಕರ ದುರಂತವಾಗಿದ್ದರೂ ಕೂಡ ನಮ್ಮ ಜಿಲ್ಲೆಗೆ ರಾಜ್ಯ ಸರ್ಕಾರ ಕೊಟ್ಟಿರುವುದು ಕೇವಲ 20 ಲಕ್ಷ ಮತ್ತು ಇವತ್ತು ಕಳೆದ ವರ್ಷ ನಮ್ಮ ಎಲ್ಲ ಶಾಸಕರೂ ಸುಮಾರು ಜಿಲ್ಲೆಯ 10 ಶಾಸಕರ ಕಡೆಯಿಂದ 10 ಲಕ್ಷ ರೂ. ಮಾತ್ರ ಕೊಟ್ಟು 30 ಲಕ್ಷ ರೂಪಾಯಿ ಬರಕ್ಕೋಸ್ಕರ ಕಡಿತ ಮಾಡಿದ್ದೀರಿ. ಆದರೆ ನಮಗೆ ಆ ಹಣವನ್ನೂ ಕೊಟ್ಟಲ್ಲಿ ಮೂರು ಕೋಟಿ ರೂಪಾಯಿ ಲಭ್ಯವಾಗಬೇಕು. ಆ ಹಣವೂ ಸಿಕ್ಕಿಲ್ಲ. ಯಾವ ಪರಿಹಾರ ನಮಗೆ ಕೊಡಲಿಕ್ಕೆ ಸಾಧ್ಯವಾಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ನಾನು ರಾಜ್ಯ ಸರ್ಕಾರವನ್ನು ಒತ್ತಾಯ ಮಾಡುವುದು ತಕ್ಷಣ ನಾಲ್ಕು ಕೋಟಿ ರೂಪಾಯಿ ಬಿಡುಗಡೆ ಮಾಡಬೇಕು. ಉಳಿದ ನಾಲ್ಕು ಕೋಟಿ ರೂ. ಗಳನ್ನು ಕನಿಷ್ಠ 15 ದಿವಸಗಳೊಳಗಾಗಿ ಬಿಡುಗಡೆ ಮಾಡಬೇಕು. ತುರ್ತಾಗಿ ನಾಲ್ಕು ಕೋಟಿ ರೂಪಾಯಿ ಬಿಡುಗಡೆ